ಸಂಜೆವಾಣಿ
ಬುಧವಾರ 19 ಜುಲೈ 2023

ರಾಜ್ಯಮಟ್ಟದ ಆನ್‌ಲೈನ್ ತರಬೇತಿಗೆ ಚಾಲನೆ

ಬೆಂಗಳೂರು, ಜು. 19– ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು, ಸಮೇತಿ(ಉತ್ತರ) ಕೃಷಿ ವಿಶ್ವವಿದ್ಯಾನಿಲಯ, ಧಾರವಾಡ ಮತ್ತು ಕೃಷಿ ಇಲಾಖೆ, ಕರ್ನಾಟಕ



ಸರ್ಕಾರದವರು ಜಂಟಿಯಾಗಿ ಆಯೋಜಿಸುತ್ತಿರುವ ರೈತರ ಕೃಷಿ ಕ್ಷೇತ್ರ ಸಮಸ್ಯೆಗಳು ಮತ್ತು ಪರಿಹಾರ" ಎಂಬ ವಿನೂತನ ರಾಜ್ಯ ಮಟ್ಟದ ಆನ್‌ಲೈನ್ ತರಬೇತಿ ಸರಣಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಆನ್‌ಲೈನ್ ತರಬೇತಿ ಕಾರ್ಯಕ್ರಮದಲ್ಲಿ ಜಂಟಿ ಕೃಷಿ ನಿರ್ದೇಶಕ ಡಾ.ಶಿವಕುಮಾರ್, ಸಂಯೋಜಕರು ಸಮೇತಿ(ದಕ್ಷಿಣ), ಡಾ.ಕೆ. ಶಿವರಾಮು ಕೃಷಿ ವಿಶ್ವವಿದ್ಯಾನಿಲಯ, ಧಾರವಾಡ ಸಂಯೋಜಕರು, ಸಮೇತಿ (ಉತ್ತರ)ಎಂ. ಗೋಪಾಲ್, ಮತ್ತು ಶ್ರೀ ಎನ್. ಬಸವರಾಜು, ರಾಜ್ಯ ಸಂಯೋಜಕರು (ಆತ್ಮ), ಬೆಂಗಳೂರು ರವರು ಭಾಗವಹಿಸಿದ್ದರು.

ತೊಗರಿ ಸೊರಗು ರೋಗದ ಸಮಗ್ರ ನಿರ್ವಹಣೆ ಕುರಿತು, ಸಸ್ಯರೋಗ ತಜ್ಞರು, ಕೃಷಿ ವಿಜ್ಞಾನ ಕೇಂದ್ರ, ಗುಲ್ಬರ್ಗ ಡಾ.ಬಿ.ಜಹೀರ್ ಅಹಮ್ಮದ್ ಮಾಹಿತಿ ನೀಡಿದರು. ಕಲುಬುರ್ಗಿ, ವಿಜಯಪುರ, ಯಾದಗಿರಿ, ರಾಯಚೂರು, ಬೀದರ್, ಬೆಂಗಳೂರು (ಗ್ರಾಮಾಂತರ) ಮತ್ತು ಚಿತ್ರದುರ್ಗ ಜಿಲ್ಲೆಯ ಸುಮಾರು ಮೂರು ಸಾವಿರ ತೊಗರಿ ಬೆಳೆಗಾರರು ಮತ್ತು ಆತ್ಮ ಸಿಬ್ಬಂದಿ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ವಿಜಯ ಕರ್ನಾಟಕ
ಗುರುವಾರ,20 ಜುಲೈ 2023

ವಿನೂತನ ಆನ್‌ಲೈನ್ ತರಬೇತಿಗೆ ಚಾಲನೆ

■ ವಿಕ ಸುದ್ದಿಲೋಕ ಬೆಂಗಳೂರು



ಬೆಂಗಳೂರು, ಧಾರವಾಡ ಕೃಷಿ ವಿವಿಗಳ 'ಸಮೇತಿ' ಹಾಗೂ ಕೃಷಿ ಇಲಾಖೆ ಜಂಟಿಯಾಗಿ ಹಮ್ಮಿಕೊಂಡಿರುವ 'ರೈತರ ಕೃಷಿ ಕ್ಷೇತ್ರ ಸಮಸ್ಯೆಗಳು ಮತ್ತು ಪರಿಹಾರ' ಎಂಬ ವಿನೂತನ ರಾಜ್ಯ ಮಟ್ಟದ ಆನ್‌ಲೈನ್ ಸರಣಿ ತರಬೇತಿ ಕಾರ್ಯಕ್ರಮಕ್ಕೆ ಬುಧವಾರ ಚಾಲನೆ ನೀಡಲಾಯಿತು

ತೊಗರಿ ಸೊರಗು ರೋಗದ ಸಮಗ್ರ ನಿರ್ವಹಣೆ ಕುರಿತು ಕಲಬುರ್ಗಿ ಕೃಷಿ ವಿಜ್ಞಾನ ಕೇಂದ್ರದ ಸಸ್ಯರೋಗ ತಜ್ಞ ಡಾ. ಬಿ. ಜಹೀರ್ ಅಹಮ್ಮದ್, ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ತೊಗರಿ ಬೆಳೆಗಾರರು ಬೇಸಿಗೆಯಲ್ಲಿ ಆಳವಾದ ಉಳುಮೆ, ಮಣ್ಣು ಪರೀಕ್ಷೆ ಆಧಾರದ ಮೇಲೆ ಸೂಕ್ತ ಪೋಷಕಾಂಶ ನೀಡಬೇಕು. ಬೆಳೆ ಪರಿವರ್ತನೆ, ಟೈಕೋಡರ್ಮಾಮಿಶ್ರಿತ ಬೇವಿನ ಹಿಂಡಿ, ಎರೆಹುಳುಗೊಬ್ಬರ ಅಥವಾ ಕಾಂಪೋಸ್ಟ್ ಗೊಬ್ಬರ ಬಳಸುವುದು, ಶಿಫಾರಸಿನ ತಳಿಗಳನ್ನು ಬಳಸುವುದು, ಹೊಲಗಳಲ್ಲಿ ಸೂಕ್ತ ಬಸಿಗಾಲುವೆಗಳನ್ನು ನಿರ್ಮಿಸುವುದು ಸೂಕ್ತ ಎಂದು ಸಲಹೆ ಮಾಡಿದರು.

ಆನ್‌ಲೈನ್ ತರಬೇತಿ ಕಾರ್ಯಕ್ರಮದಲ್ಲಿ ಬೆಂಗಳೂರು ಕೃಷಿ ವಿವಿಯ ಜಂಟಿ ಕೃಷಿ ನಿರ್ದೇಶಕ ಡಾ. ಶಿವಕುಮಾರ್, ಸಮೇತಿ (ದಕ್ಷಿಣ) ಸಂಯೋಜಕರಾದ ಡಾ. ಕೆ. ಶಿವರಾಮು, ಧಾರವಾಡದ ಕೃಷಿ ವಿಶ್ವವಿದ್ಯಾಲಯದ ಸಮೇತಿ (ಉತ್ತರ) ಸಂಯೋಜಕ ಎಂ.ಗೋಪಾಲ್ ಮತ್ತು ಸಂಯೋಜಕ (ಆತ್ಮ) ಎನ್. ಬಸವರಾಜು ಮತ್ತಿತರರು ಭಾಗವಹಿಸಿದ್ದರು.

ಕಲಬುರ್ಗಿ, ವಿಜಯಪುರ, ಯಾದಗಿರಿ, ರಾಯಚೂರು, ಬೀದರ್, ಬೆಂಗಳೂರು (ಗ್ರಾಮಾಂತರ) ಮತ್ತು ಚಿತ್ರದುರ್ಗ ಜಿಲ್ಲೆಗಳ ಸುಮಾರು ಮೂರು ಸಾವಿರ ತೊಗರಿ ಬೆಳೆಗಾರರು ಮತ್ತು ಆತ್ಮ ಸಿಬ್ಬಂದಿ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

20-07-2023
Vijaya Karnataka Pg.08

ಉದಯವಾಣಿ
ಗುರುವಾರ, ಜುಲೈ 20, 2023

ರಾಜ್ಯಮಟ್ಟದ ಆನ್‌ಲೈನ್ ಸರಣಿ ತರಬೇತಿ ಕಾರ್ಯಕ್ರಮಕ್ಕೆ ಚಾಲನೆ

ಬೆಂಗಳೂರು: ಬೆಂಗಳೂರು ಹಾಗೂ ಧಾರವಾಡ ಕೃಷಿ ವಿಶ್ವವಿದ್ಯಾಲಯ ಮತ್ತು ಕೃಷಿ ಇಲಾಖೆ ಸಹಯೋಗದಲ್ಲಿ ಆಯೋಜಿಸಿರುವ 'ರೈತರ ಕೃಷಿ ಕ್ಷೇತ್ರ ಸಮಸ್ಯೆಗಳು ಮತ್ತು ಪರಿಹಾರ' ಎಂಬ ರಾಜ್ಯಮಟ್ಟದ ಆನ್‌ಲೈನ್ ಸರಣಿ ತರಬೇತಿ ಕಾರ್ಯಕ್ರಮಕ್ಕೆ ಬುಧವಾರ ಚಾಲನೆ ನೀಡಲಾಯಿತು.

ಈ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದ ಕಲಬುರಗಿ ಕೃಷಿ ವಿಜ್ಞಾನ ಕೇಂದ್ರದ ಸಸ್ಯರೋಗ ತಜ್ಞ ಡಾ.ಬಿ.ಜಹೀರ್ ಅಹಮ್ಮದ್ ಅವರು 'ತೊಗರಿ ಸೊರಗು ರೋಗದ ಸಮಗ್ರ ನಿರ್ವಹಣೆ' ಕುರಿತು ಮಾಹಿತಿ ಹಂಚಿಕೊಂಡರು. ತೊಗರಿ ಬೆಳೆಯು ಸೊರಗು ಎಂಬ ರೋಗಕ್ಕೆ ತುತ್ತಾದರೆ, ಸಂಪೂರ್ಣ ಬೆಳೆಯೇ ನಾಶವಾಗುತ್ತದೆ. ಆದ್ದರಿಂದ ಆ ರೋಗ ಕಂಡುಬಂದಲ್ಲಿ ಆರಂಭಿಕ ಹಂತದಲ್ಲಿ 5 ಗ್ರಾಂ ಟೈಕೋಡರ್ಮಾ ಅಥವಾ ಕಾರ್ಬನ್‌ಡೈಜಿಂ ಮತ್ತು ಮ್ಯಾಂಕೋಜೆಬ್ ಸಂಯುಕ್ತ ಶೀಲಿಂದ್ರ ನಾಶಕವನ್ನು ಪ್ರತಿ ಲೀಟರ್ ನೀರಿಗೆ 2 ಗ್ರಾಂ ನಂತೆ ಬೆರೆಸಿ ನೆನೆಯುವಂತೆ ಸಿಂಪಡಿಸುವ ಮೂಲಕ ಈ ರೋಗವನ್ನು ನಿಯಂತ್ರಿಸಬಹುದು ಎಂದು ತಿಳಿಸಿದರು.

ರೈತರು ಬೆಳೆ ಬೆಳೆಯುವಾಗ ಮಣ್ಣು ಪರೀಕ್ಷೆ ಆಧಾರದ ಮೇಲೆ ಸೂಕ್ತ ಪೋಷಕಾಂಶ ಒದಗಿಸುವುದು, ಬೆಳೆ ಪರಿವರ್ತನೆ, ಟೈಕೋಡರ್ಮಾ ಮಿಶ್ರಿತ ಬೇವಿನ ಹಿಂಡಿ, ಎರೆಹುಳುಗೊಬ್ಬರ ಅಥವಾ ಕಾಂಪೋಸ್ಟ್ ಗೊಬ್ಬರ ಬಳಸುವುದು, ಶಿಫಾರಸಿನ ತಳಿಗಳನ್ನು ಬಳಸುವುದು, ಹೊಲಗಳಲ್ಲಿ ಸೂಕ್ತ ಬಸಿಗಾಲುವೆಗಳನ್ನು ನಿರ್ಮಿಸಬೇಕು ಎಂದು ಮಾಹಿತಿ ನೀಡಿದರು. ಈ ಆನ್‌ಲೈನ್ ತರಬೇತಿ ಕಾರ್ಯಕ್ರಮದಲ್ಲಿ ಕಲಬುರಗಿ, ವಿಜಯಪುರ, ಯಾದಗಿರಿ, ರಾಯಚೂರು, ಬೀದರ್, ಬೆಂಗಳೂರು (ಗ್ರಾಮಾಂತರ) ಮತ್ತು ಚಿತ್ರದುರ್ಗ ಜಿಲ್ಲೆಯ ಸುಮಾರು ಮೂರು ಸಾವಿರ ತೊಗರಿ ಬೆಳೆಗಾರರು ಭಾಗವಹಿಸಿದ್ದು, ಕೃಷಿ ಇಲಾಖೆಯ ಜಂಟಿ ಕೃಷಿ ನಿರ್ದೇಶಕ ಡಾ. ಶಿವಕುಮಾರ್, ಕೃಷಿ ವಿವಿಯ ಸಂಯೋಜಕ ಡಾ. ಕೆ. ಶಿವರಾಮು, ಧಾರವಾಡ ಕೃಷಿ ವಿವಿ ಸಂಯೋಜಕ ಎಂ. ಗೋಪಾಲ್, ರಾಜ್ಯ ಸಂಯೋಜಕ ಎನ್.ಬಸವರಾಜು ಪಾಲ್ಗೊಂಡಿದ್ದರು.

20-07-2023
Udayavani Pg.04

ಮೈಸೂರು ಮಲ್ಲಿಗೆ, ನಂಜನಗೂಡಿನ ರಸಬಾಳೆಗೆ ಮಾರ್ಕೆಟಿಂಗ್ ಪ್ರೋತ್ಸಾಹ | ಬಜೆಟ್‌ನಲ್ಲಿ ಪ್ರಕಟ

ಕಲ್ಯಾಣದ ಜಿಐಗೆ ಬ್ರ್ಯಾಂಡಿಂಗ್ ಎಂದು?

■ ದೇವಯ್ಯ ಗುತ್ತೇದಾರ್ ಕಲಬುರಗಿ
devayya.guttedar@timesgroup.com

ಭೌಗೋಳಿಕ ಸೂಚಕ (ಜಿಐ) ಹೊಂದಿದ ಮೈಸೂರು ಮತ್ತು ಚಿಕ್ಕಮಗಳೂರು ಜಿಲ್ಲೆಗಳ ಉತ್ಪನ್ನಗಳಿಗೆ ಬ್ರ್ಯಾಂಡಿಂಗ್ ಮಾಡಲು ಸಿಎಂ ಸಿದ್ದರಾಮಯ್ಯ ಬಜೆಟ್‌ನಲ್ಲಿ ಕಳೆದ ತೋರಿಸಿದಂತೆ, ಕಲಬುರಗಿಯ ತೊಗರಿ ಸೇರಿದಂತೆ ರಾಜ್ಯದ ಇತರ ಉತ್ಪನ್ನಗಳಿಗೂ ಬಲ ತುಂಬಬೇಕು ಎಂಬ ಜನಾಗ್ರಹ ವ್ಯಕ್ತವಾಗಿದೆ.

ಸಿಎಂ ಮಂಡಿಸಿದ ಬಜೆಟ್‌ನಲ್ಲಿ ಚಿಕ್ಕಮಗಳೂರಿನ ಅರೇಬಿಕಾ ಕಾಫಿ, ಮೈಸೂರು ಮಲ್ಲಿಗೆ, ವೀಳ್ಯದೆಲೆ, ನಂಜನಗೂಡಿನ ರಸಬಾಳೆಯ ಉತ್ಪಾದನೆ, ಸಂಶೋಧನೆ, ಮೌಲ್ಯಿಕರಣ, ಬ್ರ್ಯಾಂಡಿಂಗ್ ಮತ್ತು ಉತ್ತೇಜನಗೊಳಿಸುವ ಕಾರ್ಯಕ್ರಮ ಪ್ರಕಟಿಸಿದ್ದು, ಈ ಉತ್ಪನ್ನಗಳಿಗೆ ಹೆಚ್ಚು ಪ್ರಾಮುಖ್ಯತೆ ಬರಲಿದೆ. ಇದೇ ಮಾದರಿಯಲ್ಲಿ ಜಿಐ ಮಾನ್ಯತೆ ಪಡೆದ ರಾಜ್ಯದ ಸುಮಾರು 46 ಕೃಷಿ ಉತ್ಪನ್ನ, ಕರಕುಶಲ ವಸ್ತುಗಳೂ, ಆಹಾರ ಉತ್ಪನ್ನಗಳಿಗೂ ಉತ್ತೇಜನ ನೀಡಬೇಕು ಎಂಬ ಒತ್ತಾಯ ಕೇಳಿ ಬಂದಿದೆ.

ಕಲಬುರಗಿ ತೊಗರಿ ಬೇಳೆ ಅತ್ಯಂತ ಉತ್ಕೃಷ್ಟವಾಗಿದ್ದು, ರಾಜ್ಯದ ಎಲ್ಲ ಕಡೆಯೂ ಬಳಕೆಯಾಗುತ್ತಿದೆ. ಆದರೆ ಅದಕ್ಕೆ ಬ್ರ್ಯಾಂಡಿಂಗ್ ಮಾಡಿದರೆ ಇನ್ನಷ್ಟು ಹೊಳಪು ಸಿಗಲಿದೆ. ಈಗಾಗಲೇ ತೊಗರಿ ಮಂಡಳಿ 'ಭೀಮಾ ಪಲ್ಸ್' ಬ್ರ್ಯಾಂಡ್ ಅಡಿ ತೊಗರಿ ಬೇಳೆ ತಯಾರಿಸಿದೆ. ಆದರೆ ಹಣಕಾಸಿನ ತೊಂದರೆಯಿಂದ ಈ ಬ್ರ್ಯಾಂಡ್ ಹೆಚ್ಚು ಜನಪ್ರಿಯಗೊಂಡಿಲ್ಲ. ನಂದಿನಿ ಹಾಲಿನಂತೆ ಇದಕ್ಕೂ ಬ್ರ್ಯಾಂಡಿಂಗ್ ಆದ್ರೆ ಉತ್ತಮ ಮಾರುಕಟ್ಟೆ ಸಿಕ್ಕು ಸರಕಾರಕ್ಕೂ ಆದಾಯ ಬರಲಿದೆ. ಗ್ರಾಹಕರಿಗೆ ಗುಣಮಟ್ಟದ ಬೇಳೆ ಸಿಗಲಿದೆ.

ಜಿಐ ಪಡೆದ ರಾಜ್ಯದ ಉತ್ಪನ್ನಗಳಿಗೆ ಬ್ರ್ಯಾಂಡಿಂಗ್ ಅಗತ್ಯ ಇದ್ದು, ಇದಾದರೆ ಅದಕ್ಕೆ ಮತ್ತಷ್ಟು ಹೊಳಪು ಸಿಗಲಿದೆ. ಬೇಡಿಕೆ ಹೆಚ್ಚಾಗಿ ಸೂಕ್ತ ಬೆಲೆಯೂ ಸಿಗಲಿದೆ. ರಾಜ್ಯದ ಬೆಳೆಣಿಕೆಯಷ್ಟು ಉತ್ಪನ್ನಗಳಿಗೆ ಮಾತ್ರ ಬೇಡಿಕೆ ಮತ್ತು ಮಾರುಕಟ್ಟೆ ಇದೆ. ಆದರೆ ಇನ್ನೂ ಹಲವಾರು ಉತ್ಪನ್ನಗಳಿಗೆ ಮಾರುಕಟ್ಟೆಯೇ ಇಲ್ಲ. ಕೆಲವು ಉತ್ಪನ್ನಗಳಿಗೆ ಬೇಡಿಕೆ ಇದ್ದರೂ ಉತ್ಪಾದನೆ ಪ್ರಮಾಣ ತೀರಾ ಕಡಿಮೆ. ಹೀಗಾಗಿ ಜಿಐ ಪಡೆದರೂ ಅದರ ಲಾಭ ರೈತರು ಮತ್ತು ಉತ್ಪಾದಕರಿಗೆ ಸಿಗುತ್ತಿಲ್ಲ. ಇದರಕ್ಕೆ ಸರಕಾರದ ಆಸರೆ ಬೇಕಿದೆ ಎನ್ನುತ್ತಾರೆ ಉತ್ಪಾದಕರು.





ಬ್ರ್ಯಾಂಡಿಂಗ್‌ನಿಂದ ಲಾಭ ಏನು?

- ಮಾರುಕಟ್ಟೆಯಲ್ಲಿ ಗ್ರಾಹಕರಿಂದ ಬೇಡಿಕೆ ಹೆಚ್ಚಾಗಿ ಸೂಕ್ತ ಬೆಲೆಯೂ ಸಿಗುತ್ತದೆ
- ರಾಜ್ಯ, ರಾಷ್ಟ್ರಹಾಗೂ ಆಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿಯೂ ಬೇಡಿಕೆ
- ಉತ್ತಮ ಆದಾಯ ಸಿಕ್ಕು ಉತ್ಪಾದಕರ ಜೀವನಮಟ್ಟವೂ ಸುಧಾರಣೆ
- ಉತ್ಪನ್ನಗಳನ್ನು ಬೆಳೆಯುವ, ತಯಾರಿಸುವ ಕೃಷಿಕರು, ಕರಕುಶಲಕರ್ಮಿಗಳಿಗೆ ಬಲ
- ರಫ್ತು ಮಾಡಲು ವೇದಿಕೆ ಸೃಷ್ಟಿ

> ಜಿಐ ಮಾನ್ಯತೆ ಹೊಂದಿರುವ ಕಲಬುರಗಿ ಭೀಮಾ ತೊಗರಿ ಬೇಳೆಗೆ ಬ್ರ್ಯಾಂಡಿಂಗ್ ಅಗತ್ಯವಾಗಿದೆ. ಇದಾದರೆ ಉತ್ತಮ ಮಾರುಕಟ್ಟೆ ಸಿಗಲಿದ್ದು, ರೈತರಿಗೆ ಉತ್ತಮ ದರವೂ ಸಿಗಲಿದೆ. ನಂದಿನಿ ಹಾಲಿನಂತೆ ಸರಕಾರಿ ಸ್ವಾಮ್ಯದ ಗುಣಮಟ್ಟದ ಮತ್ತು ಖಾತರಿ ಇರುವ ಬೇಳೆ ಗ್ರಾಹಕರಿಗೆ ಲಭಿಸಲಿದೆ.
> -ಅಂತೋನಿ ಮರಿಯಾ ಇಮ್ಮಾನುಯಲ್ ಎಂ.ಡಿ, ತೊಗರಿ ಅಭಿವೃದ್ಧಿ ಮಂಡಳಿ, ಕಲಬುರಗಿ

ಕೇಂದ್ರ ಸರಕಾರ ಮಂಡಿಸಿದ್ದ ಕಳೆದ ಬಜೆಟ್‌ನಲ್ಲಿ ಜಿಐ ಟ್ಯಾಗ್ ಉತ್ಪನ್ನಗಳಿಗೆ ಬಲ ತುಂಬಲು 'ಒಂದು ಜಿಲ್ಲೆ ಒಂದು ಉತ್ಪನ್ನ' ಅಡಿ ಕೃಷಿ ಉತ್ಪಗಳು ಮತ್ತು ವಸ್ತುಗಳ ಮಾರಾಟಕ್ಕೆ ಪ್ರತ್ಯೇಕವಾದ ಮಾರಕಟ್ಟೆ 'ಯೂನಿಟಿ ಮಾಲ್ ಸ್ಥಾಪಿಸುವುದಾಗಿ ಪ್ರಕಟಿಸಿತ್ತು. ಇದಾದರೆ ಮಾರುಕಟ್ಟೆ ಸಮಸ್ಯೆ ಎದುರಿಸುತ್ತಿರುವ ಜಿಐ ಟ್ಯಾಗ್ ಉತ್ಪನ್ನಗಳಿಗೆ ಸೂಕ್ತ ವೇದಿಕೆಯೂ ದೊರೆಯಲಿದೆ ಎಂದು ನಿರೀಕ್ಷಿಸಲಾಗಿದೆ.

ಜಿಐ ಪಡೆದ ರಾಜ್ಯದ ಉತ್ಪನ್ನ, ಸಾಮಗ್ರಿ: ಗುಲ್ಬರ್ಗ ತೊಗರಿ, ಕಮಲಾಪುರದ ಕೆಂಬಾಳೆ, ಬ್ಯಾಡಗಿ ಮೆಣಸಿನಕಾಯಿ, ಧಾರವಾಡ ಪೇಡ, ಮೈಸೂರು ಮಲ್ಲಿಗೆ, ಮೈಸೂರು ಗಂಧದ ಎಣ್ಣೆ, ಮೈಸೂರು ಸ್ಯಾಂಡಲ್ ಸೋಪ್, ಮೈಸೂರು ಗಂಜೀಫಾ ಕಲೆ, ಮೈಸೂರು ರೇಷ್ಮೆ, ಮೈಸೂರು ಅಗರಬತ್ತಿ, ಮೈಸೂರು ವೀಳ್ಯದೆಲೆ, ನಂಜನಗೂಡಿನ ರಸಬಾಳೆ, ಕೊಡಗಿನ ಕಿತ್ತಳೆ ಮತ್ತು ಹಸಿರು ಏಲಕ್ಕಿ, ಬೆಂಗಳೂರು ನೀಲಿ ದ್ರಾಕ್ಷಿ, ಬೆಂಗಳೂರು ಕೆಂಪು ಉಳ್ಳಾಗಡ್ಡಿ, ರಾಮನಗರ ಚೆನ್ನಪಟ್ಟಣದ ಬೊಂಬೆಗಳು, ದೇವನಹಳ್ಳಿಯ ಚಕ್ಕೋತ ಹಣ್ಣು, ಸಂಡೂರಿನ ಬಂಜಾರ ಕಸೂತಿ, ಬಾಗಲಕೋಟೆಯ ಇಳಕಲ್ ಸೀರೆ, ಕನ್ನಾಳದ ಆಟಿಕೆಗಳು, ಶಿವಮೊಗ್ಗದ ಅಪ್ಪೆ ಮಿಡಿ, ಉಡುಪಿ ಮಲ್ಲಿಗೆ, ಮೈಸೂರಿನ ಚಿತ್ರಕಲೆ, ಉಡುಪಿಯ ಮತ್ತಿ ಗುಳ್ಳ ಬದನೆಕಾಯಿ. ಮಲಬಾರ್ ಅರೇಬಿಕಾ ಕಾಫಿ, ಮಾನಸೂರ್ ಮಲಬಾರ ರೋಬಸ್ಟಾ, ಮೊಳಕಾಲ್ಮೂರು ಸೀರೆಗಳು, ಸಂಡೂರ್ ಲಂಬಾಣಿ ಕಸೂತಿ, ನವಲಗುಂದ ಜಮಖಾನೆ, ಮೈಸೂರು ಚಿತ್ರಕಲೆ, ಮೈಸೂರು ರೋಸ್‌ವುಡ್ ಕೆತ್ತನೆ ಕೆಲಸ, ಕೊಲ್ಲಾಪುರಿ ಚಪ್ಪಲ್, ಹಡಗಲಿ ಮಲ್ಲಿಗೆ, ಚಿಕ್ಕಮಗಳೂರು ಅರೇಬಿಕಾ ಕಾಫಿ, ಬಾಬಾ ಬುಡನಗಿರಿ ಅರೇಬಿಕಾ ಕಾಫಿ, ಸಿರಸಿ ಅಡಕೆ.

20-07-2023
Vijaya Karnataka Pg.03

ಟೊಮೆಟೊ ದರ 70 ರೂ.ಗೆ ಇಳಿಸಿದ ಕೇಂದ್ರ ಸರಕಾರ

ಹೊಸದಿಲ್ಲಿ: ಕೇಂದ್ರ ಸರಕಾರವು ಸಬ್ಸಿಡಿಸಹಿತ ಟೊಮೆಟೊ ಬೆಲೆಯನ್ನು ಗುರುವಾರದಿಂದ ಕೆ.ಜಿಗೆ 80 ರೂ.ಗಳಿಂದ 70 ರೂ.ಗೆ ಇಳಿಸಿದೆ.

ದರ ಏರಿಕೆಯಿಂದ ಕಂಗೆಟ್ಟಿದ್ದ ಗ್ರಾಹಕರಿಗೆ ನೆರವಾಗಲು ಕೇಂದ್ರವು ದಿಲ್ಲಿ-ಎನ್‌ಸಿಆರ್ ಮತ್ತು ಇತರ ಕೆಲವು ಪ್ರಮುಖ ನಗರಗಳಲ್ಲಿ ಸಬ್ಸಿಡಿ ದರದಲ್ಲಿ ಟೊಮೆಟೊ ಮಾರಾಟಕ್ಕೆ ವ್ಯವಸ್ಥೆ ಕಲ್ಪಿಸಿದೆ. ರಾಷ್ಟ್ರೀಯ ಸಹಕಾರಿ ಗ್ರಾಹಕರ ಒಕ್ಕೂಟ(ಎನ್‌ಸಿಸಿಎಫ್) ಮತ್ತು ನ್ಯಾಷನಲ್ ಅಗ್ರಿಕಲ್ಚರಲ್ ಕೋಆಪರೇಟಿವ್ ಮಾರ್ಕೆಟಿಂಗ್ ಫೆಡರೇಶನ್ ಆಫ್ ಇಂಡಿಯಾ(ಎನ್‌ಎಎಫ್‌ಇಡಿ) ಮೂಲಕ ಜನರಿಗೆ ಕೆ.ಜಿಗೆ 80 ರೂ.ಗಳ ಸಬ್ಸಿಡಿ ದರದಲ್ಲಿ ಟೊಮೆಟೊಗಳನ್ನು ಮಾರಾಟ ಮಾಡುತ್ತಿದೆ.

ಟೊಮೆಟೋದ ಅಖಿಲ ಭಾರತ ಸರಾಸರಿ ಚಿಲ್ಲರೆ ಬೆಲೆಗಳು ಪ್ರತಿ ಕೆ.ಜಿಗೆ ಸುಮಾರು 120 ರೂ.ನಷ್ಟಿದೆ. ಕೆಲವು ಸ್ಥಳಗಳಲ್ಲಿ ಕೆ.ಜಿಗೆ 245 ರೂ.ಗಳಿಗೆ ಮಾರಾಟವಾಗಿದೆ. ರಾಷ್ಟ್ರ ರಾಜಧಾನಿಯಲ್ಲಿ ಪ್ರತಿ ಕೆ.ಜಿಗೆ 120 ರೂ.ಗೆ ಇಳಿದಿದೆ.

ಎನ್‌ಸಿಸಿಎಫ್ ಮತ್ತು ನಫೆಡ್ ಸಂಗ್ರಹಿಸಿದ ಟೊಮೆಟೊಗಳನ್ನು ಆರಂಭದಲ್ಲಿ ಕೆ.ಜಿಗೆ 90 ರೂ.ಗೆ ಮಾರಾಟ ಮಾಡಲಾಗಿತ್ತು. ನಂತರ ಜುಲೈ 16ರಿಂದ ಪ್ರತಿ ಕೆ.ಜಿಗೆ 80 ರೂ.ಗೆ ಇಳಿಸಲಾಗಿತ್ತು. ಈಗ 70 ರೂ.ಗೆ ಇಳಿಕೆ ಮಾಡಲಾಗಿದೆ. ಸರಕಾರದ ನಿರ್ದೇಶನದ ಮೇರೆಗೆ ಆಂಧ್ರ, ಕರ್ನಾಟಕ ಮತ್ತು ಮಹಾರಾಷ್ಟ್ರದ ಮಂಡಿಗಳಿಂದ ಟೊಮೆಟೊ ಖರೀದಿಯನ್ನು ಎನ್‌ಸಿಸಿಎಫ್ ಮತ್ತು ನಫೆಡ್ ಪ್ರಾರಂಭಿಸಿವೆ.

ಪೂರೈಕೆಯ ವ್ಯತ್ಯಯದಿಂದಾಗಿ ಬೆಂಗಳೂರಿನಲ್ಲಿ ಟೊಮೆಟೊ ದರ ದುಬಾರಿ ಮಟ್ಟದಲ್ಲೇ ಮುಂದುವರಿದಿದೆ. ಮುಂದಿನ ತಿಂಗಳು ಹೊಸ ಬೆಳೆ ಬಂದ ನಂತರ ದರ ಇಳಿಯಬಹುದೆಂದು ವರ್ತಕರು ಹೇಳಿದ್ದಾರೆ.



20-07-2023
Vijaya Karnataka Pg.01

ಟೊಮೇಟೊ ಇಳುವರಿಗೆ ನೂತನ ತಂತ್ರಜ್ಞಾನ ಅಗತ್ಯ



ಸಂ.ಕ. ಸಮಾಚಾರ, ದೊಡ್ಡಬಳ್ಳಾಪುರ

ಹಾಡೋನಹಳ್ಳಿ ಕೃಷಿ ವಿಜ್ಞಾನ ಕೇಂದ್ರ ಮತ್ತು ತೋಟಗಾರಿಕಾ ಇಲಾಖೆ ಇವರ ಸಹಯೋಗದೊಂದಿಗೆ ಭಾರತೀಯ ಕೃಷಿ ಅನುಸಂಧಾನ ಪರಿಷತ್‌ನ 95ನೇ ಸಂಸ್ಥಾಪನಾ ದಿನಾಚರಣೆ ಅಂಗವಾಗಿ ತಂತ್ರಜ್ಞಾನ ದಿನವನ್ನು ಆಯೋಜಿಸಿದ್ದು, ಟೊಮೇಟೊ ಬೆಳೆಯಲ್ಲಿ ಸಮಗ್ರ ರೋಗ ಮತ್ತು ಕೀಟ ನಿರ್ವಹಣೆ ಬಗ್ಗೆ ತರಬೇತಿ ನೀಡಲಾಯಿತು.

ಕಾರ್ಯಕ್ರಮದ ಉದ್ಘಾಟನೆಯನ್ನು ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿ ಮತ್ತು ಮುಖ್ಯಸ್ಥರಾದ ಡಾ. ಬಿ.ಜಿ.ಹನುಮಂತರಾಯ ಮತ್ತು ತೋಟಗಾ ಉಪನಿರ್ದೇಶಕ ಜೆ.ಗುಣವಂತ ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಡಾ. ಬಿ.ಜಿ.ಹನುಮಂತರಾ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಟೊಮೇಟೊ ಬೆಲೆಯು ಹೆಚ್ಚಾಗಿದ್ದು. ಇದು ರೈತರ ಪಾಲಿಗೆ ಸಂತೋಷದಾಯಕವಾಗಿದ್ದು, ಮುಂದಿನ ದಿನಗಳಲ್ಲಿ ಎಲ್ಲಾ ಬೆಳೆಗಳಿಗೂ ಉತ್ತಮ ಬೆಲೆ ಪಡೆಯಬೇಕೆಂದು ಆಶಯ ವ್ಯಕ್ತಪಡಿಸಿದರು. ತೋಟಗಾರಿಕಾ ಉಪನಿರ್ದೇಶಕ ಗುಣವಂತ, ಜೆ. ಅವರು ಮಾತನಾಡಿ ಬೆಂಗಳೂರು ಗ್ರಾ. ಜಿಲ್ಲೆಯಲ್ಲಿ ಟೊಮೇಟೊ ಬೆಳೆಯನ್ನು ಹೆಚ್ಚಾಗಿ ಬೆಳೆಯಲಾಗುತ್ತಿದೆ. ಉತ್ತಮ ಇಳುವರಿ ಪಡೆಯುವ ನಿಟ್ಟಿನಲ್ಲಿ ನೂತನ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಬೇಕು. ಹಾಗೂ ತೋಟಗಾರಿಕಾ ಇಲಾಖೆಯ ವತಿಯಿಂದ ದೊರಕುವ ಸವಲತ್ತುಗಳನ್ನು ರೈತರು ಸದುಪಯೋಗ ಪಡಿಸಿಕೊಳ್ಳಬೇಕೆಂದು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಬೆಂಗಳೂರು ಗ್ರಾ. ಜಿಲ್ಲೆಯ ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕರು, ಅಧಿಕಾರಿಗಳು ಭಾಗವಹಿಸಿದ್ದರು.

20-07-2023
Samyuktha Kar. Pg.03

ಆರ್ಥಿಕ ಸಂಕಷ್ಟದಲ್ಲಿದ್ದ ರೈತನ ಕೈಹಿಡಿದ ಕೆಂಪು ಸುಂದರಿ

ಟೊಮೇಟೊ ಬೆಳೆಗಾರ ನರಸಪ್ಪ ಕೋಟಿ ವೀರ

ಮುನಿರಾಜು ಎಂ ಅರಿಕೆರೆ ಚಿಕ್ಕಬಳ್ಳಾಪುರ

ಕೈಕೆಸರಾದರೆ ಬಾಯಿ ಮೊಸರು ಎನ್ನುವ ಗಾದೆಯಂತೆ ಜಿಲ್ಲೆಯ ರೈತರೊಬ್ಬರು ಎಂಟು ಎಕರೆ ಪ್ರದೇಶದಲ್ಲಿ ಬೆಳೆದಿರುವ ಟೊಮೇಟೊ ಬೆಳೆಯಿಂದಾಗಿ ಕೋಟಿವೀರ ರಾಗಿದ್ದಾರೆ.



ಚಿಕ್ಕಬಳ್ಳಾಪುರ ಜಿಲ್ಲೆ ಚೇಳೂರು ತಾಲೂಕು ಪುಲಿಗಲ್ ಗ್ರಾಮ ಪಂಚಾಯಿತಿಗೆ ಸೇರಿದ ಎ.ಬೆಲ್ಲಂಪಲ್ಲಿಯ ಪ್ರಗತಿಪರ ರೈತ ಬಿ.ನರಸಿಂಹಪ್ಪ ಎನ್ನುವವರು ತಮ್ಮ 8 ಎಕರೆ ಪ್ರದೇಶದಲ್ಲಿ ಟೊಮೇಟೊ ಬೆಳೆದು ಒಂದು ಕೋಟಿ ರುಪಾಯಿ ಸಂಪಾದನೆ ಮಾಡಿದ್ದಾರೆ.

'ರೈತಾಪಿಗಳ ಪಾಲಿಗೆ ಇಂತಹ ಸುದಿನ ಗಳು ಬರುವುದೇ ಕಡಿಮೆ. ಏನೇ ಆಗಲಿ ಬೇಸಾಯ ಮಾತ್ರ ಮರೆಯುವುದಿಲ್ಲ. ಈ ಹಿಂದೆಯೂ ವಾಣಿಜ್ಯ ಬೆಳೆಗಳಾದ ಬೀನ್ಸ್, ಬದನೆಕಾಯಿ, ಮೆನಸಿನಕಾಯಿ, ಹೂ ಎಲೆಕೋಸು ಇತರೆ ತರಕಾರಿಗಳನ್ನು ಬೆಳೆದು ಸ್ವಲ್ಪಮಟ್ಟಿಗೆ ನಷ್ಟ ಕೂಡ ಅನುಭವಿಸಿದ್ದೇವೆ. ಸಾಲಗಾರರೂ ಆಗಿದ್ದಿದೆ. ಆದರೆ ಇದೀಗ ನಮ್ಮ ಪಾಲಿಗೆ ಟೊಮೇಟೊ ಬೆಲೆ ಮತ್ತು ಬೆಳೆ ದೇವರು ಕೊಟ್ಟ ವರದಂತಾಗಿದೆ' ಎನ್ನುತ್ತಾರೆ ರೈತ ಬಿ.ನರಸಿಂಹಪ್ಪ.

'ಈಗಾಗಲೇ ಮೂರು ಬಾರಿ ಟೊಮೇಟೊ ಕೊಯ್ಲು ಮಾಡಿದ್ದು, 1 ಕೋಟಿಗೂ ಅಧಿಕ ಹಣ ಕೈಸೇರಿದೆ. 4 ತಿಂಗಳ ಹಿಂದೆ 8 ಎಕರೆಯಲ್ಲಿ ಟೋಮೆಟೊ ಬೆಳೆಯಲು ಸಸಿಯಿಂದ ಮೊದಲಾಗಿ ಔಷಧ, ಗೊಬ್ಬರ, ಕೂಲಿ ಎಲ್ಲ ಸೇರಿ ಈವರೆಗೆ 10 ಲಕ್ಷ ಖರ್ಚು ಮಾಡಲಾಗಿದೆ. ಟೋಮೆಟೊ ಬಿಡಿಸಲು ಕೂಲಿ ಕಾರ್ಮಿಕರನ್ನಿಟ್ಟು ಬಾಕ್ಸ್‌ಗಳಿಗೆ ತುಂಬಿ ಕೋಲಾರ ಹಾಗೂ ಚಂತಾಮಣಿ ಮಾರುಕಟ್ಟೆಗಳಿಗೆ ತೆಗೆದುಕೊಂಡು ಹೋಗಿ ನೇರವಾಗಿ ಮಾರಾಟಗಾರರಿಗೆ ಮಾರಾಟ ಮಾಡಲಾಗಿದ್ದು, ಮಧ್ಯವರ್ತಿಗಳ ಹಾವಳಿ ಕೂಡ ತಪ್ಪಿದೆ. ಎಲ್ಲ ಬೆಳೆಗಳಿಗೂ ಇದೇ ರೀತಿ ಬೆಲೆ ಬಂದರೆ ರೈತನ ಬದುಕು ಬಂಗಾರವಾಗಲಿದೆ. ಕೃಷಿ ಸಂಸ್ಕೃತಿ ಉಳಿಯಲಿದೆ' ಎನ್ನುತ್ತಾರೆ ನರಸಿಂಹಪ್ಪ.



ಟೊಮೇಟೊ ಬೆಳೆಗೆ ಹಗ್ಗ ಕಟ್ಟುತ್ತಿರುವ ಪ್ರಗತಿಪರ ರೈತ ಬಿ.ನರಸಿಂಹಪ್ಪನ ಮಗ ವಿಶಾಲ್.



ಕಳ್ಳರ ಕಾಟ ತಪ್ಪಿಸಲು ನೆರವಾಗಿ

ರೈತಾಪಿ ವರ್ಗ ಎಷ್ಟೇ ಲೆಕ್ಕಾಚಾರ ಮಾಡಿ ಬೆಳೆದರೂ ಕಳೆದ ಹತ್ತಾರು ವರ್ಷಗಳಲ್ಲಿ ಟೊಮೇಟೊ ಬೆಳೆ ಸೇರಿದಂತೆ ಇತರೆ ವಾಣಿಜ್ಯ ಬೆಳೆಗಳಿಗೆ ಈಗಿನಂತೆ ಬೆಲೆ ದೊರೆಯುವುದು ಅಪರೂಪ. ಕಳೆದ ಹತ್ತು ವರ್ಷಗಳಲ್ಲಿ ಟೊಮೇಟೊ ಬೆಲೆ ಈಗಿನಂತೆ ಬಾಕ್ಸ್‌ಗೆ 2000-2500 ರು. ಬೆಲೆಗೆ ಮಾರಾಟವಾಗಿಲ್ಲ. ಎಷ್ಟೋ ಸಾರಿ ಲಕ್ಷಾಂತರ ರುಪಾಯಿ ಖರ್ಚು ಮಾಡಿ ಬೆಳೆದಾಗಲೂ ಕೆ.ಜಿಗೆ 5 ಅಥವಾ 10 ರು.ಗೆ ಮಾರಾಟ ಮಾಡಿದ್ದೇವೆ. ಅನೇಕ ಬಾರಿ ರಸ್ತೆ ಬದಿ ಸುರಿದು ಮನೆಗೆ ವಾಪಸ್ಸಾಗಿದ್ದೇವೆ. ಕಳೆದ ಒಂದೂವರೆ ತಿಂಗಳಿಂದ ಉತ್ತಮ ಬೆಲೆ ಬಂದಿರುವುದು ರೈತರ ಮೊಗದಲ್ಲಿ ಸಂತಸ ಮೂಡಿಸಿದೆ. ಕಳ್ಳಕಾಕರ ಕಾಟ ತಡೆಯಲು ಜಿಲ್ಲಾಡಳಿತ ಸರಕಾರ ರೈತರಿಗೆ ನೆರವಾಗಬೇಕು ಎಂದು ರೈತ ಸಂಘ ಮತ್ತು ಹಸಿರು ಸೇನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಭಕ್ತರಹಳ್ಳಿ ಭೈರೇಗೌಡ ಆಗ್ರಹಿಸಿದ್ದಾರೆ.

20-07-2023
Vishwa Vani Pg.04

ಕಸ ಕಡ್ಡಿಯಿಂದ ಆವೃತ ಕೋಶ ಕೀಟ

ಕಸ-ಕಡ್ಡಿಗಳಿಂದ ಆವೃತವಾದ ಕೋಶವನ್ನು ಹೊಂದಿರುವ ಈ ಕೀಟವನ್ನು (ಖ್ಯುಚಿಠಜಿ ಚ್ಛಿಜ/ ಖ್ಯು ಚ್ಛಿಜ), ನೋಡಿದ ತಕ್ಷಣ, ಇದೇನೋ ಕಸ ಇದ್ದಹಾಗಿದೆಯಲ್ಲಾ ಅಂತ ಅಂದುಕೊಳ್ಳುವವರೇ ಹೆಚ್ಚು. ಇದು ಆಗಾಗ ಸಂಚರಿಸುತ್ತಾ, ಇಲ್ಲವೇ ಎಲೆ ಕಾಂಡಗಳಿಗೆ ಅಂಟಿಕೊಂಡು ಆಗಾಗ ತನ್ನ ತಲೆಯನ್ನು ಕೋಶದಿಂದ ಹೊರಚಾಚಿ ಹರಿತವಾದ ತನ್ನ ಹಲ್ಲಿನಿಂದ ಎಲೆಯನ್ನು ಕತ್ತರಿಸುತ್ತದೆ. ಕೊಂಚ ಅಪಾಯದ ಮುನ್ಸೂಚನೆ ಸಿಕ್ಕರೂ ಕೂಡಾ ತಲೆಯನ್ನು ಕೋಶದೊಳಗೆ ಎಳೆದುಕೊಂಡು ಮಿಸುಕಾಡದೇ ಸಂಭಾವ್ಯ ವೈರಿಗಳನ್ನು ಬೇಸ್ತು ಬೀಳಿಸಿ ಬಚಾವಾಗುವುದು. ನೋಟಕ್ಕೆ ಆಕರ್ಷಕವಾಗಿಲ್ಲದಿದ್ದರೂ ಅವುಗಳ ಕಾರ್ಯ ವಿಧಾನ ಖಂಡಿತ ಗಮನಿಸುವಂತಹದ್ದು. ಅವುಗಳ ಪರಭಕ್ಷಕ ಕೌಶಲ್ಯ ನಿಜವಾಗಿಯೂ ಪ್ರಯೋಜನಕಾರಿಯೇ.

ಈ ಕೀಟಗಳು ವ್ಯಾಪಕ ಶ್ರೇಣಿಯ ರಕ್ಷಣಾ ಕಾರ್ಯ ವಿಧಾನಗಳನ್ನು ರೂಢಿಸಿಕೊಂಡಿವೆ. ಕೋಟ್ಯಂತರ ಜೀವ ಪ್ರಭೇದಗಳ ನಡುವೆ ಎಲ್ಲಾ ಜೀವಿಗಳು ಬಾಳಿ ಬದುಕಲು, ಸ್ವಯಂ ರಕ್ಷಣೆ ಆಹಾರ, ಲೈಂಗಿಕ ಕ್ರಿಯೆ ಹೀಗೆ ನಿರಂತರ ಒಂದಲ್ಲಾ ಒಂದು ರೀತಿ ಹೋರಾಟ ಮಾಡುತ್ತಿರಬೇಕಾಗುತ್ತದೆ. ಸಕಲ ಜೀವ-ಜಂತುಗಳಿಗೂ ಈ ತರಹದ ಸೋಗು ಅನಿವಾರ್ಯ. ಕೆಲವು ಜೀವಿಗಳು ಛದ್ಮವೇಷ ಧರಿಸಿ ತಮಗಿಂತ ಅಪಾಯಕಾರಿಯಾದ ಜೀವಿಗಳನ್ನು ಹೋಲುವುದೋ, ಅಥವಾ ತಮ್ಮ ಸುತ್ತಮುತ್ತಲಿನ ಪರಿಸರದ ವರ್ಣ ವೈವಿಧ್ಯ ಚಿತ್ತಾರಗಳನ್ನೇ ಯಥಾವತ್ತಾಗಿ ಅನುಕರಿಸುವ, ಅನುಸರಿಸುವ ಮೂಲಕ ಪರಿಸರದಲ್ಲಿ ಲೀನವಾಗುವುದೋ, ಅಥವಾ ಬೇರೇ ಇನ್ಯಾವುದೋ ವ್ಯವಸ್ಥಿತ ತಂತ್ರ, ಅಳವಡಿಸಿಕೊಳ್ಳುವ ಮೂಲಕ ತಮ್ಮ ಜೀವ ರಕ್ಷಣೆ ಮಾಡಿಕೊಳ್ಳುತ್ತವೆ.

ಇನ್ನೂ ಕೆಲವು ಜೀವಿಗಳು ಪರ ಭಕ್ಷಕವನ್ನು ತಡೆಯಲು ಸಹಕಾರಿಯಾಗುವಂತೆ ತಮ್ಮ ಶರೀರದಲ್ಲೇ ವಿಧ ವಿಧದ ರಾಸಾಯನಿಕ ದ್ರವಗಳನ್ನು ಉತ್ಪಾದಿಸಿಕೊಂಡು, ಪ್ರಾಣಾಪಾಯದ ಪರಿಸ್ಥಿತಿಯಲ್ಲಿ ಈ ರಾಸಾಯನಿಕಗಳನ್ನು ಶತ್ರು ಜೀವಿಗಳ ಮೇಲೆ ಪ್ರಯೋಗಿಸಿ ಅವುಗಳನ್ನು ಹಿಮ್ಮೆಟ್ಟಿಸಿ ತಮ್ಮ ಆತ್ಮ ರಕ್ಷಣೆ ಮಾಡಿಕೊಳ್ಳುವುದು. ಈ ತಂತ, ಅಚ್ಚರಿ ಮೂಡಿಸುವಷ್ಟು ವಿಶಿಷ್ಟವಾಗಿದೆ.

ಕೀಟಗಳು ಭೂಮಿಯ ಮೇಲಿನ ಅತ್ಯಂತ ವೈವಿಧ್ಯಮಯ ಪ್ರಾಣಿಗಳ ಗುಂಪು; ಇಂತಹ ಸೂಕ್ಷ್ಮ ಜೀವಿಗಳ ಸಂಖ್ಯೆ ಜಗತ್ತಿನಲ್ಲಿಹೇರಳವಾಗಿದೆ. ತಾಳ್ಮೆ ಮತ್ತು ಸೂಕ್ಷ್ಮ ವೀಕ್ಷಣೆಯ ಹವ್ಯಾಸ ಬೆಳೆಸಿಕೊಂಡಲ್ಲಿ ಜೀವ ಜಗತ್ತಿನ ಇಂತಹ ಅನೇಕ ನಿಗೂಢಗಳನ್ನು ಅನುಭವಿಸಬಹುದು. ನೋಡುವ ಮನಸ್ಸಿದ್ದರೆ ನಮ್ಮೂರಿನ ತಗ್ಗು-ದಿಣ್ಣೆಗಳಲ್ಲೇ, ಮರ-ಹಸಿರುಗಳಲ್ಲೇ ಈ ತರಹದ ಅನೇಕ ಅಪೂರ್ವ ಕೀಟಗಳು ಕಾಣಸಿಗುತ್ತವೆ.



20-07-2023
Vijaya Kar. Spl. Pg.04

The power in pomegranate seeds

LYDIA MANOHAR

POMEGRANATE seeds are well known for their skin benefits and for raising hemoglobin levels. There are many additional advantages to it. Just like the hundreds of granules inside the pomegranate fruit, there are numerous undiscovered advantages. Dr Vinitha Krishnan, the chief clinical dietician, at SRM Institute of Medical Science, Chennai, gives us a thorough breakdown of the pomegranate seed's nutritional benefits.



Health benefits

The entire fruit has magical benefits. The skin, pith, granules, and flowers can be consumed.

- It contains polyphenols that have anti-inflammatory, anti-microbial and antioxidant properties.
- It aids in controlling inflammatory arthritis, high blood pressure, high cholesterol, oxidative stress and hyperglycemia.
- Studies have shown that these seeds can reduce the risk of developing prostate cancer.
- Oil can also be extracted from pomegranate seeds. It is rich in punicic acid which is absent in other fruits.
- This oil is high in estrogen which can be given to menopausal women whose estrogen levels are low.
- Studies have shown that these seeds can protect us from UV and AV rays, therefore it is a skin cancer prevention.
- It helps in the prevention of autoimmune diseases, rheumatoid arthritis in particular.
- It also benefits dental health by strengthening gums and reducing the risk of tooth decay.

Nutritional value (per 100g)
Sugar: 14g
Fibre: 7g
Protein: 3g

Limitations

- Everyone can consume the seeds. It doesn't have any harmful effects.
- Initially, diabetic patients were advised not to consume excessive amount as it contains the properties of sugar like sucrose, glucose, and fructose. People with diabetes or chronic diseases should consult a dietician to know the appropriate amount to intake.

Recipe

Pomegranates can be incorporated into a variety of recipes like smoothies, fruit salads, juices, pudding, ice creams and so on.

Pomegranate salad

- Add your preferred fruits to the salad. Add pomegranate seeds to the bowl.
- Add a pinch of cumin powder, pepper, a few fresh mint leaves and 2 tablespoons of lemon juice. Add chopped cucumbers. Pour 1/2 cup of yogurt into the bowl.
- Again add pomegranate seed over yogurt and top it with walnuts. Finally, toss all the ingredients together before serving.



20-07-2023
Ind. Exp Spl. Pg.03

ಕೃಷಿ ಪಂಡಿತ ಪ್ರಶಸ್ತಿಗಾಗಿ ರೈತರಿಂದ ಅರ್ಜಿ ಆಹ್ವಾನ

ಬೆಂಗಳೂರು: ರಾಜ್ಯ ಕೃಷಿ ಕ್ಷೇತ್ರದಲ್ಲಿ ವಿನೂತನ, ಹೊಸ ಅನ್ವೇಷಣೆ ಮತ್ತು ಸೃಜನಾತ್ಮಕ ಕಾರ್ಯಗಳಿಂದ ವಿಭಿನ್ನ ಸಾಧನೆ ಮಾಡಿದ ಸೃಜನಶೀಲ ರೈತ ಮತ್ತು ರೈತ ಮಹಿಳೆಯರಿಂದ 2023-24ನೇ ಸಾಲಿನ ಕೃಷಿ ಪಂಡಿತ ಪ್ರಶಸ್ತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜುಲೈ 24 ಕೊನೆಯ ದಿನವಾಗಿದೆ. ಅರ್ಜಿ ನಮೂನೆ, ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳು, ಸ್ಪರ್ಧಿಸಲು ಅರ್ಹತೆ ಮತ್ತಿತರ ಹೆಚ್ಚಿನ ಮಾಹಿತಿಗಾಗಿ ಹತ್ತಿರದ ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿ ಅಥವಾ ತಾಲೂಕು ಸಹಾಯಕ ಕೃಷಿ ನಿರ್ದೇಶಕರನ್ನು ಸಂಪರ್ಕಿಸುವಂತೆ ಕೃಷಿ ಇಲಾಖೆ ಪ್ರಕಟಣೆ ತಿಳಿಸಿದೆ.

20-07-2023
Kannada Prabha Pg.02

After tomatoes, ginger prices turn too hot to handle

Scanty rains, high demand push rates up

BELAGAVI, DHNS

Prices of ginger have hit an all-time high of Rs 250 to Rs 300 per kg in the retail market even as consumers bear the brunt of the rise in prices of tomatoes.

Deficit rains during the monsoon season have affected ginger production, pushing up the prices.

Trader Amar Kugaji at Raviwar Peth said, "We procure ginger from Kerala, Maharashtra and Shivamogga in Karnataka. Prices last week were Rs 200 per kg and it is a norm during this time of the year. But a sudden rise in prices has been witnessed for over a week."

Trader Faiz Attar said, "We are trading in ginger and garlic for over 40 years since the time of my father. We get ginger from Himachal Pradesh and prices were in the range of Rs 50 to Rs 100 per kg and sometimes increased to Rs 150 per kg. This year, we have witnessed a huge rise and customers have started purchasing lesser quantity than needed."



A trader sells ginger at a market in Belagavi on Wednesday.

"Ever since Covid-19 broke out, people were using ginger in more quantity for preparing 'kashaya'. It is a must for both vegetarian and non-vegetarian delicacies. Shops selling ginger flavoured tea too have increased. These could be the reasons for the rise in prices," he said.

Customer Nagaraj Desai said, "We need ginger for kashaya, tea and different chutneys. We are forced to buy the commodity, despite the high prices, as there is no alternative to it."

Hotelier Durgappa Naik said, "We use ginger for most of the items we prepare. Prices of vegetables have already increased and now, ginger prices have doubled. We will be forced to increase the rates, if the trend continues."

Suresh Punyannavar, marketing assistant at APMC, Belagavi, said the price of ginger a fortnight ago at APMC was Rs 230 a kg. It has now increased to Rs 250, he added.

20-07-2023
Deccan Herald Pg.04

SHOCKING EARNINGS

Thanks to tomatoes, Pune farmer hits jackpot

PUNE, PTI

Even as the soaring prices of tomatoes are burning a hole in the common man's pocket, a farmer from Pune in Maharashtra has become a millionaire by selling his bountiful yield of the key kitchen staple for Rs 3 crore in just over a month while overcoming various challenges.

Farmer Ishwar Gaykar (36), from Pachghar village in Junnar tehsil of Pune district, had faced the difficult decision of dumping a large quantity of harvested tomatoes in May this year due to low prices.

Undeterred by the setback, he continued to exhibit unwavering determination and work tirelessly on his 12-acre farm to cultivate tomatoes.

Now, amid the skyrocketing prices of tomatoes, Gaykar's hard work has paid off handsomely, transforming him into a millionaire as he claimed to have earned Rs three crore through the sale of his crop yield between June 11 and July 18.

Talking to PTI, Gaykar said during the period, he sold 18,000 crates of tomatoes (each crate comprising 20 kg of tomatoes) at the Agricultural Produce Market Committee (APMC) at Narayangaon in Junnar tehsil for Rs three crore.

He aims to earn another Rs 50 lakh by selling the remainder of the produce, which is roughly 4,000 crates.

The total input cost of cultivation, including transportation, was Rs 40 lakh, he said.

"I have an 18-acre farm where I cultivate tomatoes on 12 acres. I have sold 18,000 crates since June 11 and have so far earned Rs 3 crore," said Gaykar.

On June 11, he fetched a price of Rs 770 per crate (Rs 37 to Rs 38 per kg), and on July 18, he sold tomatoes at Rs 2,200 per crate (Rs 110 per kg).

Gaykar recalled how he had to dump a large quantity of harvested tomatoes just two months ago due to low prices.

"In May, I grew tomatoes on one-acre land, but had to throw away large quantities of the produce as the prices were very low. I had thrown the produce away as the per crate rate was just Rs 50, which means Rs 2.50 per kg," he said.

Gaykar said that in 2021, he incurred losses worth Rs 15 lakh to Rs 16 lakh.

"When I was throwing the tomatoes in May, this yield on the 12-acre land was under cultivation. Undeterred by the setback, I kept up my resilience and continued spending on the cultivation of tomatoes," he said.

20-07-2023
Deccan Herald Pg.08

Tiger orchids, largest orchid species, bloom at Kerala's Jawaharlal Nehru botanic garden

The Hindu Bureau
THIRUVANANTHAPURAM

It's that time of the year when the spotlight is on the Tiger orchids at the Jawaharlal Nehru Tropical Botanic Garden and Research Institute (JNTBGRI), Palode, a town in Thiruvananthapuram.

The orchid variety, native to South East Asia, is in bloom at the Palode institute. *Grammatophyllum speciosum*, popularly known as the 'Tiger orchid,' is the largest orchid species in the world, JNTBGRI officials said.

They are called Tiger orchid because of their splendid flowers which sport striking brown spots against a yellow backdrop, bringing to mind tigers.



In full bloom: Tiger Orchid at Jawaharlal Nehru Tropical Botanic Garden and Research Institute in Kerala. SPECIAL ARRANGEMENT

This species is native to Malaysia, Indonesia, Thailand, Myanmar and Laos.

Flowering starts in June and lasts till August. This three-month period is also a time when orchid lovers flock to the institute to have a peek.

The huge size of this orchid in the natural habitat produces five cm-thick stems that grow up to three metres in length.

Tallest orchid

"The plant was listed by the Guinness Book of World Records as the world's tallest orchid, with specimens recorded up to 7.62 metres in height," the institute said.

The inflorescence, standing three metres high, can have 80-100 flowers each.

After 8-12 years of growth, *Grammatophyllum speciosum* produces flowers in alternate years in its natural habitat.

20-07-2023
Hindu Pg.05

ಮಹಾರಾಷ್ಟ್ರ: ಒಂದು ತಿಂಗಳಲ್ಲೇ 3 ಕೋಟಿ ರೂಪಾಯಿ ಆದಾಯ

ರೈತನಿಗೆ ಸಿರಿವಂತಿಕೆ ತಂದ ಟೊಮೆಟೊ

ಪುಣೆ (ಪಿಟಿಐ): ದಿನೇ ದಿನೇ ಟೊಮೆಟೊ ಬೆಲೆ ಗಗನಕ್ಕೇರುತ್ತಿದ್ದು ಜನಸಾಮಾನ್ಯರಿಗೆ ಹೊರೆಯಾಗಿ ಪರಿಣಮಿಸಿದ್ದರೆ, ಮಹಾರಾಷ್ಟ್ರದ ಪುಣೆ ಜಿಲ್ಲೆಯ ರೈತರೊಬ್ಬರು ಟೊಮೆಟೊ ಮಾರಿ ತಿಂಗಳೊಪ್ಪತ್ತಿನಲ್ಲೇ ₹ 3 ಕೋಟಿ ಆದಾಯ ಗಳಿಸಿದ್ದಾರೆ.

ಪುಣೆ ಜಿಲ್ಲೆಯ ಜುನ್ನಾರ್ ತಾಲ್ಲೂಕಿನ ಪಾಚ್‌ಘರ್ ಗ್ರಾಮದ ಈಶ್ವರ್ ಗಾಯ್ಕರ್ ಭರ್ಜರಿ ಆದಾಯ ಗಳಿಸಿದ ರೈತ.

ಇದೇ ವರ್ಷ ಮೇ ತಿಂಗಳಲ್ಲಿ ಟೊಮೆಟೊ ಬೆಳೆದಿದ್ದ ಈಶ್ವರ್, ಬೆಲೆ ಕುಸಿತದಿಂದಾಗಿ ಬೆಳೆಯನ್ನು ರಸ್ತೆಗೆ ಎಸೆಯಬೇಕಾದ ಕಠಿಣ ಸವಾಲನ್ನು ಎದುರಿಸಬೇಕಾಯಿತು. ಆದರೂ ವಿಚಲಿತರಾಗದೇ ಈಗಾಗಲೇ ತಮ್ಮ 12 ಎಕರೆಯಲ್ಲಿ ಬೆಳೆಯುತ್ತಿದ್ದ ಟೊಮೆಟೊ ಬೆಳೆಯನ್ನು ಉಳಿಸಿಕೊಳ್ಳುವ ಅಚಲ ನಿರ್ಧಾರವನ್ನು ಕೈಗೊಂಡರು. ಇದಕ್ಕಾಗಿ ಹಗಲೂ ರಾತ್ರಿ ದಣಿವರಿಯದೇ ದುಡಿದರು.



ಮಹಾರಾಷ್ಟ್ರದ ಪುಣೆ ಜಿಲ್ಲೆಯ ಪಾಚ್‌ಘರ್ ಗ್ರಾಮದ ತಮ್ಮ ಟೊಮೆಟೊ ಹೊಲದಲ್ಲಿ ಪತ್ನಿಯೊಂದಿಗೆ ರೈತ ಈಶ್ವರ್ ಗಾಯ್ಕರ್ —ಪಿಟಿಐ ಚಿತ್ರ

ಜೂನ್ 11ರಿಂದ ಜುಲೈ 18ರ ನಡುವೆ ಜುನ್ನಾರ್ ತಾಲ್ಲೂಕಿನ ನಾರಾಯಣಗಾಂವ್ ಎಪಿಎಂಸಿಯಲ್ಲಿ 18 ಸಾವಿರ ಕ್ರೇಟ್‌ಗಳಷ್ಟು (1 ಕ್ರೇಟ್‌ಗೆ 20 ಕೆಜಿ) ಟೊಮೆಟೊ ಮಾರಿರುವ ಈಶ್ವರ್ ₹ 3 ಕೋಟಿ ಗಳಿಸಿದ್ದಾರೆ. ಉಳಿದಿರುವ ಸುಮಾರು 4 ಸಾವಿರ ಕ್ರೇಟ್‌ಗಳಷ್ಟು ಟೊಮೆಟೊ ಮಾರಿ ₹ 50 ಲಕ್ಷ ಹೆಚ್ಚುವರಿ ಆದಾಯ ಪಡೆಯುವ ನಿರೀಕ್ಷೆ ಅವರದ್ದು.

'ಟೊಮೆಟೊ ಬೆಳೆಯಲು, ನಿರ್ವಹಣೆ ಮತ್ತು ಸಾಗಣೆಗಾಗಿ ಒಟ್ಟು ₹ 40 ಲಕ್ಷ ವೆಚ್ಚವಾಗಿದೆ.

ಜೂನ್ 11ರಂದು ಒಂದು ಕ್ರೇಟ್‌ಗೆ ₹770ರಂತೆ ಮಾರಿದ್ದೆ. ಆಗ ಬೆಲೆ ಕೆಜಿಗೆ ₹37ರಿಂದ 38 ಇತ್ತು. ಆದರೆ ಜುಲೈ 18ರಂದು ಒಂದು ಕ್ರೇಟ್‌ಗೆ ₹2,200 ಪಡೆದಿದ್ದೆ. ಆಗ 1 ಕೆಜಿಗೆ ₹110 ಆಗಿತ್ತು' ಎಂದು ಈಶ್ವರ್ ಮಾಹಿತಿ ನೀಡಿದರು.

'ಟೊಮೆಟೊ ಬೆಳೆಗಾರರಿಗೆ ಇದು ಉತ್ತಮ ಸಮಯ. ಆದರೆ, ನಾನು ಕೆಟ್ಟ ಸಮಯವನ್ನೂ ನೋಡಿದ್ದೇನೆ. ಇದೇ ವರ್ಷದ ಮೇ ತಿಂಗಳಲ್ಲಿ ಒಂದು ಎಕರೆಯಷ್ಟು ಮಾತ್ರ ಟೊಮೆಟೊ ಬೆಳೆ ಕೈಗೆ ಬಂದಿತ್ತು. ಆದರೆ ಆಗ ಬೆಲೆ ತೀವ್ರ ಕುಸಿತವಾಗಿದ್ದರಿಂದ ಬೆಳೆದ ಬಹುಪಾಲು ಬೆಳೆಯನ್ನು ಎಸೆಯಬೇಕಾಯಿತು. ಆಗ ಪ್ರತಿ ಕ್ರೇಟ್ ದರ ಕೇವಲ ₹ 50 ಇತ್ತು. ಅಂದರೆ 1 ಕೆ.ಜಿ.ಟೊಮೆಟೊಗೆ ಕೇವಲ ಎರಡೂವರೆ ರೂಪಾಯಿ ಇತ್ತು' ಎಂದು ಅವರು ನೆನಪಿಸಿಕೊಂಡರು.

20-07-2023
Prajavani Pg.01